ರಕ್ಷಿಸಬೇಕಿರುವುದು ಹಸಿರನ್ನಷ್ಟೇ ಅಲ್ಲ; ಹಸಿರಿಗೆ ಮಡಿಲಾದ ಮಣ್ಣನ್ನೂ.

# ಮಣ್ಣಿನ ಅರಿವು ಮತ್ತು ಗ್ರಹಿಕೆಯ ವೈಜ್ಞಾನಿಕ ವಾಸ್ತವಗಳು

ರಾಜ್ಯದ ಮಣ್ಣಿನ ಫಲವತ್ತತೆಗೆ ಸಂಬಂಧಿಸಿದಂತೆ ನಡೆದ ಮಾದರಿ ಸಮೀಕ್ಷೆಯ ಪ್ರಕಾರ ಶೇ.33.78ರಷ್ಟು ಮಣ್ಣು ಆಮ್ಲೀಯ, ಶೇ.26.7ರಷ್ಟು ಕ್ಷಾರೀಯ. ಸಹಜ ಮಣ್ಣಿನ ಪ್ರಮಾಣ ಶೇ.40ರಷ್ಟು ಮಾತ್ರ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೀಡಿರುವ ಈ ಅಂಕಿಅಂಶ ಮಣ್ಣಿನ ತೀವ್ರ ಅನಾರೋಗ್ಯವನ್ನು ಸೂಚಿಸುವಂತಿದೆ. ‘ಮಣ್ಣಿನ ಫಲವತ್ತತೆ ಕಡಿಮೆ ಆಗುತ್ತಿರುವುದರಿಂದ ಭವಿಷ್ಯದ ಕರ್ನಾಟಕ ಕುರಿತು ಆತಂಕ ಉಂಟಾಗಿದೆ’ ಎನ್ನುವ ಮುಖ್ಯಮಂತ್ರಿಗಳ ಆತಂಕ ರಾಜ್ಯಕ್ಕಷ್ಟೇ ಸೀಮಿತವಾದುದಲ್ಲ; ಜಾಗತಿಕ ಸಂದರ್ಭದಲ್ಲೂ ಮಣ್ಣಿನ ಆರೋಗ್ಯ ಸಮರ್ಪಕವಾಗಿಲ್ಲ. ಮಣ್ಣು ಬದುಕಿನ ಭಾಗವಾಗದ ಸಾಮಾಜಿಕ ಸನ್ನಿವೇಶದಿಂದಾಗಿ ಹವಾಮಾನ ಬದಲಾವಣೆಯಂತಹ ನೈಸರ್ಗಿಕ ವಿಕೋಪಗಳಿಂದ ಮಾನವಕುಲವು ನರಳುವಂತಾಗಿದೆ. ಮಣ್ಣಿನ ಬಗ್ಗೆ ಯೋಚಿಸಲು, ಮಣ್ಣಿನ ರಕ್ಷಣೆಯನ್ನು ಆದ್ಯತೆಯ ವಿಷಯವನ್ನಾಗಿ ಪರಿಗಣಿಸಲು ಇದು ಸಕಾಲ. ಸ್ವಾತಂತ್ರ್ಯದಿನದ ಮಾಸದಲ್ಲಿ ಮಣ್ಣಿನ ಸ್ವಾತಂತ್ರ್ಯ-ಸ್ವರಾಜ್ಯದ ಕುರಿತೊಂದು ವಿಶ್ಲೇಷಣೆ.

■ ಟಿ.ಎಸ್. ಚನ್ನೇಶ್